‘ಕಾವ್ಯ ರಚಿಸುವ ಎಲ್ಲಾ ನಿಯಮಗಳು.’ ‘ನೀನು ಅವುಗಳನ್ನು ಎಲ್ಲಿ ಕಲಿತೆ?’ ಕಾಗೆ ಅತ್ಯಾಶ್ಚರ್ಯದಿಂದ ಕೇಳಿತು. ‘ಇಂತಹ ವಿಚಾರ ಗೊತ್ತಿರುವುದರಲ್ಲಿ ನೀನೇ ಮೊದಲು ಎಂದು ತಿಳಿದಿರಬಹುದು’ ‘ಹಾಗೇನೂ ಇಲ್ಲ!’

ನನ್ನ ತಂದೆಯವರೂ ಸಹ ಈ ಬಗ್ಗೆ ಯೋಚಿಸಿದ್ದರು. ಓರ್ವ ದೊಡ್ಡ ಕವಿಯ ಮನೆಯ ಮೇಲೆ ಕುಳಿತು, ಅವರು ತನ್ನ ವಿದ್ಯಾರ್ಥಿಗೆ ಪ್ರತಿದಿನ ಬೋಧಿಸುವಾಗ, ತಾವೂ ಕಲಿತರು. ಆರು ತಿಂಗಳವರೆಗೆ ನಡೆದ ಈ ತರಗತಿಗಳಲ್ಲಿ ಒಂದನ್ನೂ ತಪ್ಪಿಸಿಕೊಳ್ಳಲಿಲ್ಲ. ಬೋಧನೆಯ ಕೊನೆಯ ಹೊತ್ತಿಗೆ, ನನ್ನ ತಂದೆಯವರು ತಮಿಳಿನ ಛಂದಸ್ಸು ಮತ್ತು ಕಾವ್ಯ ಮೀಮಾಂಸೆಯಲ್ಲಿ ಪರಿಣತಿ ಹೊಂದಿದ್ದರು. ವ್ಯಾಕರಣದ ಆ ನಿಯಮಗಳಂತೆ ಅವರು ಕಾವ್ಯದ ಒಂದು ಸಾವಿರ ವಿವಿಧ ಮಾದರಿಗಳನ್ನು ರಚಿಸಲು ಕೆಲವು ನಿಯಮಗಳನ್ನು ಗೊತ್ತು ಮಾಡಿದ್ದರು. ದುರದೃಷ್ಟವೆಂದರೆ, ತಮ್ಮ ಕೃತಿಯನ್ನು ವಿದ್ವಾಂಸರ ಅನುಮೋದನೆಗಾಗಿ ಒಪ್ಪಿಸುವವರೆಗೆ ಅವರು ಬದುಕಿರಲಿಲ್ಲ. ಹಾಗಾಗಿ, ನಮ್ಮ ಭಾಷೆಯಲ್ಲಿ ಕಾವ್ಯದ ಹೊಸ ಸಿದ್ಧಾಂತವು ಮನೆಯಲ್ಲೇ ಮುದುಡಿ ಹೋಯಿತು. ನಾನು ನನ್ನ ತಂದೆಯ ಒಬ್ಬಳೇ ಮಗಳು. ಅವರಿಗೆ ಬೇರೆ ಮಕ್ಕಳಿರಲಿಲ್ಲ. ಹೆಣ್ಣು ಮಕ್ಕಳು ಈ ಹೊಸ ಸಿದ್ಧಾಂತವನ್ನು ವಿದ್ವಾಂಸರ ಎದುರಿಗೆ ಮಂಡಿಸಿ, ನಮ್ಮ ಭಾಷೆಗೆ ಹೊಸ ರೂಪ ನೀಡುವುದನ್ನು ನಮ್ಮ ಶಾಸ್ತ್ರ ಒಪ್ಪುವುದಿಲ್ಲ. ಆದರೆ, ನಾನು ಆ ಸಿದ್ಧಾಂತವನ್ನು ನಿನಗೆ ಬೋಧಿಸಬಲ್ಲೆ. ನೀನು ಅದನ್ನು ನನ್ನಿಂದ ಕಲಿತು, ವಿದ್ವತ್ ಗಣದ ಮುಂದೆ ಮಂಡಿಸಬಹುದು. ನಿನಗೆ ರಾಜರ ಆಸ್ಥಾನದಲ್ಲಿ ಅದಕ್ಕೆ ಪ್ರತಿಫಲವೂ ಸಿಗಬಹುದು. ಅದರಿಂದ ಜಗತ್ಪ್ರಖ್ಯಾತಿ ಪಡೆಯಬಹುದು. ಮನೆಗೆ ಬಾ ಪ್ರತಿದಿನ ಎರಡು ಗಂಟೆಗಳ ಕಾಲ ಅದನ್ನು ನಿನಗೆ ಹೇಳಿಕೊಡುತ್ತೇನೆ. ಎರಡು ತಿಂಗಳಲ್ಲಿ ನೀನು ನಮ್ಮ ಕಾಗೆಯ ರಾಜನಿಂದ ಉನ್ನತವಾದ ಗೌರವವನ್ನು ಗಳಿಸುತ್ತೀಯ’ ಹೆಂಡತಿ ಹೇಳಿದಳು. ‘ನಾನು ರಿಪಬ್ಲಿಕ್ ಪಕ್ಷದ ಬೆಂಬಲಿಗ. ರಾಜನ ಗೌರವ ಮತ್ತು ಪ್ರಶಸ್ತಿಗೆ ಮುಗಿಬೀಳುವುದಿಲ್ಲ’ ಎಂದು ಕಾಗೆ ಕಡ್ಡಿ ಮುರಿದಂತೆ ಹೇಳಿತು. ಹೆಂಡತಿ ಹೇಳಿದಳು, ‘ಹಾಗೇ ಆಗಲಿ... ನೀನು ಮೊದಲು ಹೇಳಿದಂತೆ, ನಮ್ಮ ಭಾಷೆಯ ಬೆಳವಣಿಗೆಗೆ ಕೊಡುಗೆ ನೀಡಿದರೆ ನಿನ್ನ ನಂತರವೂ ನಿನ್ನ ನೆನಪು ಉಳಿಯುತ್ತದೆ. ಅದಕ್ಕಾದರೂ ನನ್ನೊಂದಿಗೆ ಬಾ. ನಾನು ನಿನಗೆ ಕಾವ್ಯ ರಚಿಸುವ ಕಲೆಯನ್ನು ಹೇಳಿಕೊಡುತ್ತೇನೆ.’

ಗಂಡು ಕಾಗೆ, ಹೆಣ್ಣು ಕಾಗೆ, ಎರಡೂ ಗೂಡಿಗೆ ಹಾರಿದ ನಂತರ, ಮನ್ಮಥ ಆಕಾಶದಲ್ಲಿ ಅವರಿಂದ ಸ್ವಲ್ಪ ದೂರದಲ್ಲಿ ಚಲಿಸುತ್ತಿದ್ದನು. ಪಶ್ಚಿಮ ಘಟ್ಟದಲ್ಲಿ ಆಗ ಮಳೆ ಬೀಳುತ್ತಿತ್ತು. ಗಂಡು ಮತ್ತು ಹೆಣ್ಣು ಪ್ರೀತಿಯಲ್ಲಿ ಕೂಡುವಂತೆ ಅದು ಪ್ರಕೃತಿಯ ಆದೇಶ. ಇಂತಹ ಹವಾಮಾನ ಮತ್ತು ಸ್ಥಳದಲ್ಲಿ, ಪ್ರೇಮ ದೇವತೆ ಬಹಳ ಕಾರ್ಯ ನಿರತನಾಗಿರುತ್ತಾನೆ. ಹಾಗಾಗಿ, ತನ್ನೆಲ್ಲಾ ಬಾಣಗಳನ್ನು ಬತ್ತಳಿಕೆಯಿಂದ ಬಿಟ್ಟು ತನ್ನದೇ ಜಗತ್ತಿಗೆ ಹೊರಡುತ್ತಿದ್ದ, ರತಿಯೊಂದಿಗೆ ಪ್ರೇಮದಲ್ಲಿ ಒಂದುಗೂಡುತ್ತಾ ಅವನಲ್ಲಿ ಎರಡೇ ಎರಡು ಬಾಣಗಳು ಉಳಿದಿದ್ದವು. ಎರಡನ್ನೂ ತೆಗೆದು ಪ್ರೇಮದ ಜೋಡಿ ಕಡೆ ಕಳುಹಿಸಿದ, ಇಬ್ಬರಿಗೂ ಒಂದೊಂದರಂತೆ.

ಕಾಗೆ ದಂಪತಿಗಳು ತಮ್ಮ ಗೂಡನ್ನು ಸೇರುವ ಮೊದಲು ಪರಸ್ಪರ ಪ್ರೀತಿ ಮಾಡುತ್ತಾ ಚುಂಬಿಸುತ್ತಾ ಇದ್ದವು. ತಮ್ಮ ಗೂಡನ್ನು ತಲಪುತ್ತಲೇ, ತಮ್ಮ ಆವೇಶವನ್ನು ನಿಯಂತ್ರಿಸಲಾಗದೆ ಪ್ರೀತಿ ಮಾಡತೊಡಗಿದವು. ಕಾವ್ಯದ ಕಲೆಯನ್ನು ಕಲಿಯುವ ಯೋಚನೆ ಕಾಗೆಯ ಮನಸ್ಸನ್ನು ಬಿಟ್ಟು ಬಿಟ್ಟಿತು. ಅವರು ತಮ್ಮ ಆವೇಶದಲ್ಲಿ ಎಷ್ಟು ಮುಳುಗಿದ್ದರೆಂದರೆ, ಬೆಳಗಾಗುವವರೆಗೂ ಎದ್ದಿದ್ದರು. ನಂತರ ಅವು ಮರದ ದಿಮ್ಮಿಗಳಂತೆ ಮಲಗಿ ಎದ್ದಿದ್ದು ಬೆಳಗಾದ ನಂತರವೇ. ಆಹಾರಕ್ಕಾಗಿ ಹುಡುಕುವ ಆಲೋಚನೆ ಅವರ ಮನಸ್ಸಿನಲ್ಲಿ ಮೂಡುವ ಮೊದಲು, ಮನ್ಮಥ ಆ ದಾರಿಯಲ್ಲಿ ಹಾದು ಹೋದ. ಗೂಡಿನಲ್ಲಿ ಒಂದು ದಿನದ ಮೊದಲು ನಡೆದದ್ದು, ಮತ್ತೆ ಪುನರಾವೃತ್ತಿ ಆಯಿತು. ಈ ರೀತಿ ಅನೇಕ ದಿನಗಳು ಉರುಳಿದವು. ಗಂಡು ಕಾಗೆ ತನ್ನ ಕಾಗೆಯ ಭಾಷೆಯಲ್ಲಿ ಛಂದಸ್ಸು ಕಲಿಯುವುದನ್ನು ಸಂಪೂರ್ಣ ಮರೆತೇ ಬಿಟ್ಟಿತು. ಅದು ಕಾವ್ಯದ ಕಲೆಯನ್ನು ಅಧ್ಯಯನ ಮಾಡಲೇ ಇಲ್ಲ. ಅದರ ಬದಲು ಪ್ರೀತಿ ಮಾಡುವ ಕಲೆ ಕಲಿಯುವುದನ್ನು ಆರಂಭಿಸಿತು.

●